ಅರಣ್ಯ ಇಲಾಖೆ


ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು – 560083

**OFFICE OF THE DEPUTY CONSERVATOR OF FORESTS, BANNERGHATTA NATIONAL PARK, BENGALURU – 560 083**

ದೂರವಾಣಿ: 08028429950, ಫ್ಯಾಕ್ಸ್ ನ.: 08028429366 & E-Mail ID : dcfbnp83@gmail.com


ಸಂಖ್ಯೆ : ಎ5/ಗಣಿಗಾರಿಕೆ/ಏವ-I/ 2013-14 ದಿನಾಂಕ: 26-08-2013.


RECEIVED
30 AUG 2013
MS 14348
KSPCB, Bangalore


ರವರಿಗೆ,

ಉಪ ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ರಾಮನಗರ ಜಿಲ್ಲೆ,
ರಾಮನಗರ.

ಮಾನ್ಯರೇ

ವಿಷಯ : ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪರಿಸರ ಸೂಕ್ಷ್ಮವಲಯದಲ್ಲಿ ನಡೆದಿರುವ ಕಲ್ಲು ಗಣಿಗಾರಿಕೆ ತಡೆಗಟ್ಟುವ ಬಗ್ಗೆ.

ಉಲ್ಲೇಖ: ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್‌ಪಿಟಿಷನ್ ಸಂಖ್ಯೆ 337/1995, ಪಿ.460/2004 ಮತ್ತು ಪರಿಸರ ಮತ್ತು ಅರಣ್ಯ ಸಚಿವಾಲಯ (ವನ್ಯಜೀವಿ ವಿಭಾಗ) ಭಾರತ ಸರ್ಕಾರ ಇವರ ನಿರ್ದೇಶನಗಳು ಸಂಖ್ಯೆ ಎಫ್‌ನಂ 6-10/2011, ಡಬ್ಲ್ಯುಎಲ್ ದಿನಾಂಕ: 15-3-2011.

**************************

ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972 ಮತ್ತು ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ ರಾಷ್ಟ್ರೀಯ ಉದ್ಯಾನವನಗಳು ಮತ್ತು ಅಭಯಾರಣ್ಯಗಳ ಗಡಿಯಿಂದ 10ಕಿ.ಮೀ ಅಂತರವರೆಗೆ ಅರಣ್ಯೇತರ ಚಟುವಟಿಕೆಗಳನ್ನು ನಿರ್ಭಂಧಿಸುವುದು, ವನ್ಯಜೀವಿಗಳ ಆವಾಸಸ್ಥಾನ (Habitat)ಗಳ ರಕ್ಷಣೆ ಮತ್ತು ಸುರಕ್ಷತೆ ದೃಷ್ಟಿಯಿಂದ ಅಗತ್ಯವಾಗಿರುತ್ತದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪ್ರದೇಶವು ಮುಖ್ಯವಾಗಿ ಆನೆಗಳ ಆವಾಸಸ್ಥಾನ ಮತ್ತು ನಿರಂತರ ಚಲನವಲನಗಳ ((Elephant Corridor) ಪ್ರದೇಶವಾಗಿದ್ದು ಈ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕು ಮತ್ತು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನಲ್ಲಿಯೂ ಸಹಾ ವಿಸ್ತಾರವಾಗಿರುತ್ತದೆ. ಈ ವನ್ಯಜೀವಿಗಳ ಶಾಂತಿ ಮತ್ತು ನೆಮ್ಮದಿಯ ಬದುಕಿಗೆ ಭಂಗ ತರುವ ಕೆಲವು ಕಲ್ಲು ಗಣಿಗಾರಿಕೆ ಮತ್ತು ಕಲ್ಲುಪುಡಿ ಘಟಕಗಳ ಚಟುವಟಿಕೆಗಳು ನಡೆಯುತ್ತಿರುತ್ತದೆ. ಹೊಂದಿಕೊಂಡಂತೆ ಇರುವ ಕನಕಪುರ ತಾಲ್ಲೂಕಿನ ಬಿಳಿಕಲ್ ಅರಣ್ಯ ಪ್ರದೇಶ, ಮಂಜುನಾಥ ಮೀಸಲು ಅರಣ್ಯ ಮತ್ತು ರಾಮದೇವರಬೆಟ್ಟ ಮೀಸಲು ಅರಣ್ಯ ಮತ್ತು ಗುಲ್ಲಹಟ್ಟಿಕಾವಲ್ ಅರಣ್ಯ ಪ್ರದೇಶ, ಕರಡಿಕಲ್ ಅರಣ್ಯ ಪ್ರದೇಶ ಮತ್ತು ಬಂಟನಾಳ ಅರಣ್ಯ ಪ್ರದೇಶಗಳು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿದ್ದು, ಅರಣ್ಯ ಗಡಿಯಿಂದ ಪರಿಸರ ಸೂಕ್ಷ್ಮ ವಲಯದಲ್ಲಿ(Eco sensitive Zone) ಕಾರ್ಯನಿರ್ವಹಿಸುತ್ತಿದ್ದು, ಇವುಗಳಿಂದ ಉಂಟಾಗುವ ಭಾರಿ ಸ್ಫೋಟಗಳು ಮತ್ತು ಪರಿಸರ ಹಾಳುಮಾಡುವ ಧೂಳಿನಿಂದ ವನ್ಯಜೀವಿಗಳು ಕಂಗೆಟ್ಟು ಮಾನವ ಪ್ರಾಣಿಗಳ ಸಂಘರ್ಷದಿಂದ ಅಪಾರ ಬೆಳೆ ಹಾನಿ ಮತ್ತು ಜೀವಿ ಹಾನಿ ಸಂಭವಿಸಿರುತ್ತದೆ.

ಆದುದರಿಂದ ಈ ದೆಸೆಯಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪ್ರದೇಶದ ಗಡಿಯಿಂದ ಹೊರಗೆ ರಾಮನಗರ ಜಿಲ್ಲೆಯ ಪರಿಸರ ಸೂಕ್ಷ್ಮ ವಲಯದಲ್ಲಿ ಇರುವ ಕಲ್ಲುಗಣಿಗಳ ಮತ್ತು ಕಲ್ಲುಪುಡಿ ಘಟಕಗಳ ನಿಯಂತ್ರಣವನ್ನು ಕೈಗೊಳ್ಳುವ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯ ಮತ್ತು ಪರಿಸರ ಅರಣ್ಯ ಸಚಿವಾಲಯ ನಿರ್ದೇಶನಗಳಂತೆ ಉಲ್ಲೇಖಿತ ಆದೇಶಗಳಲ್ಲಿನ ಅಂಶಗಳನ್ನು ತಾವು ಪರಿಗಣಿಸಿ ಅದರಂತೆ ಸೂಕ್ತ ಕ್ರಮಕೈಗೊಳ್ಳ ಬೇಕಾಗಿರುತ್ತದೆ.

(ಪು.ತಿ.ನೋ)

ಅರಣ್ಯೇತರ ಚಟುವಟಿಕೆಗಳಾದ ಕಲ್ಲುಗಣಿಗಳು ಮತ್ತು ಕಲ್ಲುಪುಡಿ ಮಾಡುವ ಘಟಕಗಳು ಉಲ್ಲೇಖಿತ ಆದೇಶದಲ್ಲಿ ನೀಡಿರುವ ನಿರ್ದೇಶನಗಳಂತೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸುತ್ತಲಿನ 10ಕಿ.ಮೀ ಅಂತರದ ಸೂಕ್ಷ್ಮ ಪರಿಸರ ವಲಯ ಪ್ರದೇಶದಲ್ಲಿ ನಡೆಯುವ ಎಲ್ಲಾ ಕಲ್ಲುಗಣಿಗಳ ಚಟುವಟಿಕೆಗಳಿಗೆ ಪರಿಸರ ಅನುಮತಿ (Environmental Clearence)ಯನ್ನು ಸಂಬಂಧಿಸಿದ ವನ್ಯಜೀವಿ ಪ್ರಾಧಿಕಾರಗಳಿಂದ ಕಡ್ಡಾಯವಾಗಿ ಹೊಂದಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ಇದರಲ್ಲಿರುವ ಅಂಶಗಳು ಸ್ವಯಂ ವಿವರಣಾತ್ಮಕವಾಗಿರುತ್ತದೆ. ಆದುದರಿಂದ ಈ ಪತ್ರಗಳಲ್ಲಿರುವ ನಿರ್ದೇಶನಗಳ ಮತ್ತು ಆದೇಶಗಳ ಅಂಶಗಳ ಅನುಸಾರ ಮುಂದಿನ ಕ್ರಮಕೈಗೊಳ್ಳಲು ಕೋರಲಾಗಿದೆ.

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ,
ಬೆಂಗಳೂರು

ಪ್ರತಿಯನ್ನು ಗೌರವಗಳೊಂದಿಗೆ:

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ ಬೆಂಗಳೂರು ರವರ ಮಾಹಿತಿಗಾಗಿ ಒಪ್ಪಿಸಿದೆ.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ ಬೆಂಗಳೂರು ರವರ ಮಾಹಿತಿಗಾಗಿ ಒಪ್ಪಿಸಿದೆ.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಬೆಂಗಳೂರು ರವರ ಮಾಹಿತಿಗಾಗಿ ಒಪ್ಪಿಸಿದೆ.
4. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚರ್ಚ್ ರಸ್ತೆ, ಪರಿಸರ ಭವನ, ಬೆಂಗಳೂರು ರವರ ಮಾಹಿತಿಗಾಗಿ ಒಪ್ಪಿಸಿದೆ.
5. ಜಿಲ್ಲಾಧಿಕಾರಿಯವರು ಮತ್ತು ಅಧ್ಯಕ್ಷರು, ಟಾಸ್ಕ್‌ಫೋರ್ಸ್, ರಾಮನಗರ ಜಿಲ್ಲೆ, ರಾಮನಗರ ರವರಿಗೆ ಕಳುಹಿಸುತ್ತ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವ ಬಗ್ಗೆ ವಿನಂತಿಸಿದೆ.
6. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು ರವರಿಗೆ ಕಳುಹಿಸುತ್ತಾ ಸಂಬಂಧಪಟ್ಟ ಅಧಿಕಾರಿಗಳಿಗೆ ನಿಯಮಾನುಸಾರ ಕ್ರಮಕೈಗೊಳ್ಳಲು ಆದೇಶ ನೀಡುವಂತೆ ಕೋರಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ
ಬೆಂಗಳೂರು

3. **PROCEDURE TO BE FOLLOWED FOR ACTIVITIES WITHIN 10 KMS FROM BOUNDARIES OF NATIONAL PARKS AND WILDLIFE SANCTUARIES:**

3.1 In case the project site is located within the eco-sensitive zone or 10 Kms in absence of delineation of such a zone from the boundaries of National Parks, Wildlife Sanctuaries or is an Elephant Reserve/Tiger Reserve and/or important corridors of wildlife movement, the User agency/Project Proponent should seek prior clearance from the Standing Committee of NBWL before seeking Environmental Clearance and the procedure as mentioned under paragraphs 2.1 to 2.8 above are required to be followed in such cases also.

[Note: *The Standing Committee of NBWL has been insisting on the recommendation of the State Board for Wildlife for all proposals, including those falling within 10 Kms from the boundary of National Parks and Sanctuary*].

4. **PROPOSALS FOR SURVEY WORK TO BE CARRIED OUT INSIDE NATIONAL PARKS AND WILDLIFE SANCTUARIES:**

In case any kind of survey work and/or Environment Impact Assessment (EIA) studies, that is a prelude to future diversion of land, are to be taken up in areas involving a wildlife habitat, then also the entire procedure, as prescribed in paragraph 2 above would need to be followed.

*******************